**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 220/2023**

| | | |
|---|---|---|
| ಸಾಕ್ಷಿದಾರರ ಹೆಸರು | **ಸವಿತಾ ಎನ್ ಎಂ** | **ಪ್ರಾಸಾಃ 01** |
| ತಂದೆಯ/ಗಂಡನ ಹೆಸರು | ಶ್ರೀನಿವಾಸ ಎಂ ಎಂ | **ಚಾಸಾಃ 02** |
| ವಯಸ್ಸು | 36 ವರ್ಷ | ದಿಃ 16.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ಕೆಲಸ | ಅಂಗನವಾಡಿ ಕಾರ್ಯಕರ್ತೆ | |
| ವಾಸ | ನಗರ್ಲೆ ಗ್ರಾಮ | |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನಾನು ಅಂಗನವಾಡಿ ಕಾರ್ಯಕರ್ತೆಯಾಗಿ 2007 ರಿಂದ ಇಲ್ಲಿಯವರೆಗೆ ನಗರ್ಲೆ ಗ್ರಾಮದ 5 ನೇ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ.

ಚಾಸಾ 1 ರವರು ನನ್ನ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಪ್ರಸ್ತುತ ಅವರು ಮೃತಪಟ್ಟಿದ್ದಾರೆ. ಚಾಸಾ 3 ರವರ ಪರಿಚಯ ಇದೆ. ಪ್ರಸ್ತುತ ಅವರು ಮೃತಪಟ್ಟಿದ್ದಾರೆ. ಚಾಸಾ 4 ನಮ್ಮ ಮೇಲಧಿಕಾರಿಗಳು.

ದಿಃ 23.11.2022 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ನಗರ್ಲೆ ಗ್ರಾಮದ 5 ನೇ ಅಂಗನವಾಡಿಯಲ್ಲಿ ನಾನು ಮತ್ತು ಚಾಸಾ 1 ರವರು ಕೆಲಸ ಮಾಡುತ್ತಿದ್ದ ಸಮಯದಲ್ಲಿ ಆರೋಪಿ ಅಂಗನವಾಡಿಯೊಳಗೆ ಬಂದು ಏಕಾಏಕಿ ಬಂದು ನನ್ನನ್ನು ಕುರಿತು ನಿಮ್ಮ ಸಹಾಯಕಿಯಾದ ಚಾಸಾ 1 ರವರಿಗೆ ಬುದ್ದಿ ಕಲಿಸು ಇಲ್ಲ ಅಂದರೆ ಯಾರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳಿ ಚಾಸಾ 1 ರವರಿಗೆ ಬೇವರ್ಸಿ ಮುಂಡೆ ಎಂದು ಬೈದು, ಚಾಸಾ 1 ರವರ ಎಡಕೆನ್ನೆಗೆ ಕೈಯಿಂದ ಹೊಡೆದಿರುತ್ತಾರೆ. ಹಾಗೂ ಚಾಸಾ 1 ರವರನ್ನು ತಳ್ಳಿದ್ದು ಅವರು ಅಡುಗೆ ಮಾಡಿದ ಪತ್ರೆಗಳನಳ್ಳು ಇಟ್ಟಿದ್ದ ಗ್ಯಾಸ್ ಸ್ಟೌವ್ ಮೇಲೆ ಬಿದ್ದಿರುತ್ತಾರೆ. ಆ ಸಮಯದಲ್ಲಿ ಮಕ್ಕಳಿಗೆ ಯಾವುದೇ ಅನಾಹುತ ಆಗಿರಲಿಲ್ಲ. ಮಕ್ಕಳೆಲ್ಲಾ ಜೋರಾಗಿ ಕಿರುಚಾಡುತ್ತಿದ್ದರು. ನಾನು ಆರೋಪಿಗೆ ನೀವು ಹೋಗಿ ಎಂದು ಎಷ್ಟೆ ಸಮಾಧಾನ ಮಾಡಿದರೂ ಕೇಳಲಿಲ್ಲ. ಸುಮಾರು ಸಮಯದವರೆಗೂ ಬೈಯುತ್ತಾ ಕಿರುಚಾಡುತ್ತಾ ಅಲ್ಲೆ ನಿಂತಿರುತ್ತಾರೆ. ನಂತರ ಸದರಿ ವಿಚಾರವನ್ನು ಚಾಸಾ 1 ರವರು ನಮ್ಮ ಮೇಲಧಿಕಾರಿಗಳ ಗಮನಕ್ಕೆ ತಂದು ಅವರ ಸೂಚನೆಯಂತೆ ದಿಃ 07.12.2022 ರಂದು ಚಾಸಾ 1 ರವರು ಆರೋಪಿಯ ವಿರುದ್ಧ ದೂರು ದಾಖಲಿಸಿರುತ್ತಾರೆ.

ನಂತರ ದಿಃ 08.12.2022 ರಂದು ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಾಗ ಚಾಸಾ 1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆಗ ಸಮಯ ಸುಮಾರು 11 ರಿಂದ 12 ಗಂಟೆ ಆಗಿರುತ್ತದೆ. ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು.

ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಪೊಲೀಸರು ಮಹಜರ್ ಅನ್ನು ಬೆಳಿಗ್ಗೆ 1030 ರಿಂದ 11.15 ರ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಪಿ.ಕೆ ವಕೀಲರಿಂದಃ

ಚಾಸಾ 1 ಮತ್ತು 3 ರವರು ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿಗೂ ಮೊದಲಿನಿಂದಲೂ ದ್ವೇಷ ಇತ್ತು ಎಂದರೆ ಸರಿ. ಚಾಸಾ 3 ಹಾಗೂ ಆರೋಪಿಯ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ 3 ರವರ ನಡುವೆ ಹಿಂದಿನಿಂದಲೂ ಜಾಗದ ವಿಚಾರವಾಗಿ ಗಲಾಟೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರು ಚಾಸಾ 3 ರವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಕೃತ್ಯ ಸಮಯದಲ್ಲಿ ಅಂಗನವಾಡಿಯೊಳಗೆ ನಾನು ಆರೋಪಿ ಹಾಗೂ ಚಾಸಾ 1 ಮತ್ತು ಮಕ್ಕಳನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಮೊದಲಿನಿಂದಲೂ ಸಣ್ಣಪುಟ್ಟ ವಿಚಾರಗಳಿಗೆ

ನನಗೂ ಮತ್ತು ಆರೋಪಿಗೂ ಗಲಾಟೆಯಾಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿ ಗ್ರಾಮಪಂಚಾಯಿತ್ತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಎಂದರೆ ಸರಿ. ಅವರ ಪ್ರತಿಸ್ಪರ್ಧಿಯಾಗಿ ಸುಮನಾ ಎನ್ನುವವರು ಸ್ಪರ್ಧಿಸಿದ್ದರು ಎಂದರೆ ಸಾಕ್ಷಿ ಅವರು ಒಬ್ಬರೇ ಅಲ್ಲ ಇನ್ನು ಉಳಿದವರು ಸಹ ಸ್ಪರ್ಧಿಸಿದ್ದರು ಎನ್ನುತ್ತಾರೆ. ನಾನು ಸುಮನಾ ಎನ್ನುವವರ ಪರವಾಗಿ ಚುನಾವಣೆಯಲ್ಲಿ ಬೆಂಬಲ ನೀಡಿದ್ದೆ ಎಂದರೆ ಸರಿಯಲ್ಲ. ನಾನು ಸುಮನಾ ರವರ ಚಿತಾವಣೆಯ ಮೇರೆಗೆ ಚಾಸಾ 1 ರವರ ಮೂಲಕ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ. ಚಾಸಾ 1 ರವರು ಅಂಗನವಾಡಿಯಲ್ಲಿ ಸರಬರಾಜು ಮಾಡುತ್ತಿದ್ದ ಆಹಾರ ಪದಾರ್ಥಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಿದ್ದು ಅದನ್ನು ಪ್ರಶ್ನಿಸಿದ ಕಾರಣ ಚಾಸಾ 1 ರವರು ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ಅಂಗನವಾಡಿ ಕೇಂದ್ರಕ್ಕೆ ಬಂದು ಯಾವುದೇ ಗಲಾಟೆ ಮಾಡಿಲ್ಲ, ಚಾಸಾ 1 ರವರ ಮೇಲೆ ಹಲ್ಲೆ ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ದೂರನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ನಂತರ ನೀಡಿರುವ ಕಾರಣ ವಿಳಂಬವಾಗಿರುತ್ತದೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಓ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**

**ನ್ಯಾಯಾಲಯ, ನಂಜನಗೂಡು**